# ನಡಿಗೆಯ ಕೊನೆಗೆ

ಅಂಗಳದಾಚೆಗೆ ಚಾಚಿಕೊಂಡ ಗಿಡದ ಗೆಲ್ಲಿನಲ್ಲೊಂದು ಹೂ. ತುಡುಗುಕೈಗಳಿಗೆ ಆಹ್ವಾನದಂತೆ ನಗು. ಯಾರದೋ ಮನೆಯ ಯಾವುದೋ ಕೋಣೆಯಲ್ಲೊಂದು ಮಗು. ಭಾಷೆಗೆ ನಿಲುಕದ ಕಥೆಯೊಂದನ್ನು ಒರೆಯುವಂತೆ ಅಳು. ಯಾರ ಎದೆಯಲ್ಲೋ ಹೆಜ್ಜೆಯೂರುವಂತೆ ಪ್ರತಿ ಹೆಜ್ಜೆಗೂ ಜೀವನಪ್ರೀತಿ ಚಿಮ್ಮಿಸುವ ಉಕ್ಕು ಹರೆಯದ ತರುಣ ತರುಣಿಯರು. ಟ್ರಿಣಟ್ರಿಣಿಸುತ್ತ ಮುಂದೋಡುವ ಸೈಕಲ್ ಸವಾರ. ಕಾರಿನ ವೇಗದೊಂದಿಗೆ ಸವಾರನ ಅಹಮ್ಮಿನ ಸ್ಪರ್ಧೆ. ತರಕಾರಿ ಗಾಡಿಯ ಪಕ್ಕ, ಮಾಲೆ ಹೆಣೆಯುತ್ತ ಕುಳಿತ ಅಕ್ಕ. ಕರ್ಣಕುಂಡಲಗಳಂತೆ ಕಿವಿಗೆ ಸಿಕ್ಕಿಸಿಕೊಂಡ ವಯರುಗಳ ಮೊಬಯಲಿಗರು. ಹತ್ತಾರು ನುಡಿಗಳು ಡಿಕ್ಕಿಯಾಗಿ ಅನುರಣಿಸುವ ಹೊಸತೊಂದು ಅಸಡಾ ಬಸಡಾ ನುಡಿಯಲೆ. ತುದಿಮೊದಲಿಲ್ಲದ ಕಡಲಲೆಗಳಂತೆ ಜನ–ವಾಹನ. ಎಲ್ಲಿಗೆ ಪಯಣ? ಎಲ್ಲಿವೆ ದಡ?

ನಡಿಗೆಯೆನ್ನುವುದು ಮಯ್ಯಿಗೆ ಸಂಬಂಧಿಸಿದ್ದಷ್ಟೇ ಅಲ್ಲ, ಅದು ಮನಸ್ಸಿನ ಚಲನೆಯೂ. ಆ ಕಾರಣದಿಂದಲೇ ಪ್ರತಿ ನಡಿಗೆಯೂ ಅಪರಿಮಿತ ಚಿತ್ರಗಳನ್ನು ಕಣ್ಣಿಗೆ ತುಂಬುವುದು; ಕೆಲವು ಚಿತ್ರಗಳು ಚಿತ್ತದೊಳು ಅಚ್ಚಾಗುವವು.

ಬಸ್ಸಿನ ಪ್ರಯಾಣವೂ ಒಂದು ನಡಿಗೆಯೇ. ಓಡುವ ಬಸ್ಸಿನ ಜೊತೆಗೆ ಜಗತ್ತಿಗೂ ಕಾಲು. ಎಷ್ಟೊಂದು ಜನ, ಎಷ್ಟೊಂದು ಜೀವನ. ಒಬ್ಬರಿದ್ದಂತೆ ಒಬ್ಬರಿಲ್ಲ. ರಸ್ತೆಯೂ ಸಪಾಟಿಲ್ಲ – ಉಬ್ಬು ತಗ್ಗು. ಮುಖಗಳಂತೆ ಕಾಲುಗಳೂ ಒಂದರಂತೆ ಇನ್ನೊಂದಿಲ್ಲ. ನುಣುಪು, ಬಿರುಕು, ಬಣ್ಣ, ನಯ, ಒರಟು, ಸಪೂರ, ಭಾರ – ಒಬ್ಬೊಬ್ಬರ ಕಾಲಿಗೂ ಒಂದೊಂದು ಬೆಲೆ!

ಕಾಲಿಗೂ ಕಾಲಕ್ಕೂ ನಂಟು. ಕಾಲದ ಜೊತೆಗೆ ಕೆಲವರದು ಸಹನಡಿಗೆ. ಮತ್ತೆ ಕೆಲವರದು ಕಾಲವನ್ನು ಹಿಮ್ಮೆಟ್ಟಿಸುವ ನಾಗಾಲೋಟದ ನಡಿಗೆ. ಕಾಲಕ್ಕೆ ಹಿಮ್ಮುಖವಾಗಿ ಚಲಿಸುವವರೂ ಇಲ್ಲದಿಲ್ಲ. 'ಈ ಕಾಲ ನಮ್ಮಂಥವರಿಗಲ್ಲ' ಎನ್ನುವುದವರ ಸೊಲ್ಲು. ಯಾವ ಕಾಲ ಯಾರದು? ಕಾಲುಗಳಷ್ಟೇ ನಮ್ಮವು.

ಹೊಟ್ಟೆಪಾಡಿಗಾಗಿ ನಿಂತಲ್ಲಿ ನಿಲ್ಲದ ಸಮುದಾಯಗಳೂ ಇವೆ. ಜೀವನ ನಿರ್ವಹಣೆಯೆನ್ನುವುದೇ ಅನೇಕರ ಪಾಲಿಗೆ ಅನಿವಾರ್ಯವಾದ ನಿರಂತರ ನಡಿಗೆ. ನಡಿಗೆಯ ಉದ್ದೇಶ ಬೇರೆ ಬೇರೆ ಇರಬಹುದಾದರೂ, ಅದರೊಂದಿಗೆ ಅರಿವಿನ ಬೆಳಸು ಇದ್ದೇ ಇದೆ. ನಡಿಗೆ ನಮ್ಮ ಪೂರ್ವಸೂರಿಗಳ ಪಾಲಿಗೆ ಲೋಕವನ್ನು ತಿಳಿಯುವ ಮಾರ್ಗವಾಗಿತ್ತು. 'ದೇಶ ಸುತ್ತು ಕೋಶ ಓದು' ಎನ್ನುವ ಮಾತಿನಲ್ಲಿ ನಡಿಗೆಗೇ ಅಡಿಗೆರೆ. ಕೋಶ ಓದುವುದು ಎಲ್ಲರಿಗೂ ಸಾಧ್ಯವಾಗದಿರಬಹುದು. ದೇಶ ಸುತ್ತಾಟದ ನಡಿಗೆ ಕಾಲಿರುವ ಎಲ್ಲರಿಗೂ ಸಾಧ್ಯ ಆಗುವಂತಹದ್ದು. ಅಲ್ಲದೆ, ನಡಿಗೆ ದೊರಕಿಸಿಕೊಡುವ ನೋಟಕ್ಕೆ ಮಿಗಿಲಾದುದು ಯಾವ ಕೋಶದಲ್ಲೂ ದೊರೆಯದು. 'ನಡೆದಷ್ಟೂ ಪಥಗಳು! ನಡೆದಷ್ಟೂ ನಾಡು' ಎನ್ನುವುದು ನಮ್ಮ ಕಾಲದ ಮಹಾನ್ ಅಲೆಮಾರಿಗಳಲ್ಲೊಬ್ಬರಾದ ರಹಮತ್ ತರೀಕೆರೆ ಅವರ ಅನುಭವ ಕಥನ.

ಶರಣರ ಬದುಕನ್ನು ಮರಣದಲ್ಲಿ ನೋಡು ಎನ್ನುವ ಮಾತಿನಂತೆ, ಮಹಾತ್ಮರ ಬದುಕನ್ನು ಅವರ ನಡಿಗೆಯಲ್ಲಿ ನೋಡಲಿಕ್ಕೆ ಸಾಧ್ಯವಿದೆ. ನಡೆಗೂ ನುಡಿಗೂ ನಂಟು. ಆ ನಂಟು ನಡಿಗೆಯಲ್ಲಿ ಮುಂದುವರೆಯುವುದು. ಸ್ಥಾವರರೂಪಿ ಮಹಾತ್ಮರಿಗಿಂತಲೂ ನಡಿಗೆಯನ್ನು ನೆಚ್ಚಿದ ಮಹಾತ್ಮರನ್ನೇ ಈ ಜಗತ್ತು ಎದೆಗೆ ಹತ್ತಿರವಾಗಿಸಿಕೊಂಡಿದೆ. ದುಃಖಕ್ಕೆ ಕಾರಣವನ್ನು ಹುಡುಕುತ್ತಾ ಹೊರಟು, ದುಃಖಿತರನ್ನು ಹುಡುಕಿ ನಡೆಯುವುದು ಬುದ್ಧನ ಮಾರ್ಗವಾಯಿತು. ಗಾಂಧೀಜಿ ಅವರಂತೂ ನಡಿಗೆಗೆ ರಾಯಭಾರಿಯಂತೆ ಇರುವವರು. ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಮರಳಿದ ಅವರು, ಸ್ವಾತಂತ್ರ್ಯ ಚಳವಳಿಯಲ್ಲಿ ಭಾಗಿಯಾಗುವ ಮುನ್ನ ದೇಶ ಸುತ್ತಿದರು. ಆ ಭಾರತ ದರ್ಶನ ಗಾಂಧೀಜಿಗೆ ಅವರ ಬದುಕಿನ ದಾರಿಯನ್ನು ನಿಚ್ಚಳಗೊಳಿಸಿತು. ಸಾಬರಮತಿ ಆಶ್ರಮದಿಂದ ದಾಂಡಿ ಕಡಲತೀರದವರೆಗೆ ಗಾಂಧೀಜಿ ಕೈಗೊಂಡ 387 ಕಿಲೋಮೀಟರುಗಳ ಕಾಲ್ನಡಿಗೆಯ ದಾಂಡಿಯಾತ್ರೆ ಬ್ರಿಟಿಷರ ಪ್ರಭುತ್ವಕ್ಕೆ ಒಡ್ಡಿದ ಸವಾಲಾಗಿತ್ತು. ಆ ಘಟನೆ ನಡಿಗೆಗಿರುವ ಅಪಾರಶಕ್ತಿಯ ಒಂದು ಸಂಕೇತ. ರಾಜಕಾರಣದಲ್ಲಂತೂ ನಡೆದು ನಾಡು ಸುತ್ತಿದ ನಾಯಕರು ಜನರಿಗೆ ಹತ್ತಿರವಾದ ನಿದರ್ಶನಗಳ ಪರಂಪರೆಯೇ ಇದೆ.

ಗಾಂಧೀಜಿಯ ಮುಂಜಾನೆ ನಡಿಗೆಗಳೂ ಪ್ರಸಿದ್ಧ. ನಡೆಯುತ್ತ ನಡೆಯುತ್ತ ಗಾಂಧೀಜಿ ತಮ್ಮ ಸಹವರ್ತಿಗಳೊಂದಿಗೆ ಸಂವಾದಿಸುತ್ತಿದ್ದರು. ಮಲದ ಗುಪ್ಪೆಗಳು ಕಂಡರೆ ಮಣ್ಣು ಮುಚ್ಚುತ್ತಿದ್ದರು. ಸ್ವಚ್ಛತೆ ಎನ್ನುವುದು ಅವರ ಪಾಲಿಗೆ ಅನುದಿನ ಅನುಕ್ಷಣದ ಆಚರಣೆಯಾಗಿತ್ತು. ಅದುವೇ ಅಂತರಂಗ ಶುದ್ಧಿ, ಬಹಿರಂಗ ಶುದ್ಧಿ.

ಆರೋಗ್ಯದ ಕಾಳಜಿಯ ರೂಪದಲ್ಲಿ ನಡಿಗೆ ಈಗ ಹೆಚ್ಚು ಜನಪ್ರಿಯ. ಶಿಸ್ತಿನ ರೂಪದ 'ವಾಕಿಂಗ್' ಕೆಲವರಿಗೆ ಶಿಕ್ಷೆಯಂತೆ ಕಾಣಿಸುವುದರಲ್ಲಿ ಅಚ್ಚರಿಯೇನೂ ಅಲ್ಲ. ಬೆವರು ಸುರಿಸುವುದಷ್ಟೇ ನಡಿಗೆಯ ಉದ್ದೇಶವಾದರೆ ಅದರಿಂದ ಹೆಚ್ಚಿನ ಉಪಯೋಗವಿಲ್ಲ. ನಡಿಗೆಯಿಂದ ದಣಿಯಬೇಕಾದುದು ದೇಹವೇ ಹೊರತು ಮನಸ್ಸಲ್ಲ. ನಡೆದಂತೆಲ್ಲ ರಕ್ತದೊಳಗಿನ ಸಕ್ಕರೆ ಸವೆಯುವುದು, ಆ ಸವಿ ಮನಸ್ಸನ್ನು ತುಂಬುವುದು. ನಡೆಯುವಾಗ ದೇಹ ಎಷ್ಟೇ ದಣಿಯಲಿ ಮಣಿಯಲಿ, ಮನಸ್ಸು ಮಾತ್ರ ಕುಣಿಯಲಿ. ನಡಿಗೆ ಮನಸ್ಸಿಗೆ ಉಲ್ಲಾಸ ನೀಡಬೇಕು; ಅರಿವಿನ ಗೆರೆಗಳನ್ನು ಅಗಲಿಸಬೇಕು.

'ಎಲ್ಲಿಯೂ ನಿಲ್ಲದಿರು; ಮನೆಯನೆಂದೂ ಕಟ್ಟದಿರು; ಕೊನೆಯನೆಂದೂ ಮುಟ್ಟದಿರು' ಎನ್ನುವುದು ಕುವೆಂಪು ಅವರ 'ವಿಶ್ವಮಾನವ ಸಂದೇಶ'ದ ಒಂದು ಭಾಗ. ಈ ಕರೆಯಲ್ಲಿ, ಎಲ್ಲಿಯೂ ನಿಲ್ಲದಿರು ಹಾಗೂ ಕೊನೆಯನೆಂದೂ ಮುಟ್ಟದಿರು ಎನ್ನುವ ಮಾತು ನಿರಂತರ ನಡಿಗೆಯ ಅಗತ್ಯವನ್ನು ಮನಗಾಣಿಸುವಂತಿಲ್ಲವೆ?

ನಡಿಗೆಯ ಜೊತೆಗೆ ದಾರಿ ಸವೆಯುತ್ತದಷ್ಟೇ. ಈ ಮೊದಲು ಎಷ್ಟೋ ಮಂದಿ ಹೆಜ್ಜೆ ಮೂಡಿಸಿದ, ನಮ್ಮ ನಂತರವೂ ಅಗಣಿತ ಹೆಜ್ಜೆಗಳು ಮೂಡುವ ಪಥವದು. ಆ ಹಾದಿ ನಮಗೆ ಕಾಣಿಸುವ ಅಗಣಿತ ಬದುಕುಗಳ ಚಿತ್ರಗಳಲ್ಲಿ ನಾವೂ ಇರಬಹುದೇನೊ. ಅದನ್ನು ಕಂಡುಕೊಳ್ಳಲಿಕ್ಕೆ ಅಗತ್ಯವಾದ ಸೂಕ್ಷ್ಮನೋಟವನ್ನೂ ನಡಿಗೆಯೇ ನೀಡಬೇಕು.

ಕೂತು ಕೆಟ್ಟವರುಂಟು. ಕೊಳೆತವರೂ ಉಂಟು. ನಡೆದು ಕೆಟ್ಟವರಿಲ್ಲ. ಕೆಡುವುದಾದರೆ ಅದು ನಡಿಗೆಯ ರೂಪದ ವ್ಯಸನವಷ್ಟೇ.

ನಡಿಗೆಯೆನ್ನುವುದೊಂದು ಅನನ್ಯ ಅನುಭವ. ಕಲಿಕೆ. ಆ ಜೀವಂತ ಪಠ್ಯಕ್ಕೆ ಸಲ್ಲಬೇಕು ನಮ್ಮ ಮೆಚ್ಚುಗೆ, ಕೃತಜ್ಞತೆ, ನಮಸ್ಕಾರ.

■ **ಚಂಪಕಮಾಲಾ**

## ಮಾತೇ ಮುತ್ತು



ಎಚ್.ಎಸ್. ವೆಂಕಟೇಶಮೂರ್ತಿ

- ಇರಬೇಕು ಇರುವಂತೆ ತೊರೆದು ಸಾವಿರ ಚಿಂತೆ, ಮಳೆ ಸುರಿಸಿ ಹಗುರಾದ ಮುಗಿಲಿನಂತೆ.
- ಹಾಲು ಕೊಟ್ಟ ವಿಧುರಗೆ/ ಬಾಳು ಕೊಟ್ಟ ಮಾಧವ/ ದೇಹ ಕೊಟ್ಟ ಮಣ್ಣಿಗೆ/ ಜೀವ ಕೊಟ್ಟ ಮಾಧವ.
- ಅಮ್ಮ ನಾನು ದೇವರಾಣೆ ಬೆಣ್ಣೆ ಕದ್ದಿಲ್ಲಮ್ಮ/ ಎಲ್ಲಾ ಸೇರಿ ನನ್ನ ಬಾಯಿಗೆ ಬೆಣ್ಣೆಯ ಮೆತ್ತಿದರಮ್ಮ.
- ನಾನು ನನ್ನದು ನನ್ನವರೆನ್ನುವ/ ಹಲವು ತೊಡಕುಗಳ ಮೀರಿ/ ಭಾವಿಸಿ ಸೇರಲು ಬೃಂದಾವನವ/ ರಾಧೆ ತೋರುವಳು ದಾರಿ.
- ಕಡಲ ಮೇಲೆ ಸಾವಿರಾರು ಮೈಲಿ ಸಾಗಿಯೂ/ ನೀರಿನಾಳ ತಿಳಿಯಿತೇನು ಹಾಯಿ ದೋಣಿಗೆ?
- ಬರಿ ಹಸಿರು ಬರಿ ನೋವು/ ಎದೆಯೊಳೆಷ್ಟು ಹೆಸರು/ ಯಾರ ಮದುವೆ ದಿಬ್ಬಣವೋ/ ಸುಮ್ಮನೆ ನಿಟ್ಟುಸಿರು.
- ಗಾನದ ಗಾಯಕೆ ಮಾಯದ ನೋವಿದೆ/ ಪ್ರೀತಿಯ ಹೂವಿಗೆ ಆಳದ ಅಳಲಿದೆ.
- ಹೂವು ಹೊರಳುವವು ಸೂರ್ಯನ ಕಡೆಗೆ/ ನಮ್ಮ ದಾರಿ ಬರಿ ಚಂದ್ರನವರೆಗೆ.
- ಬೆಳಕು ಹುಡುಕಿಕೊಂಡು ಹೋದ ಮಂದಿ/ ಖುದ್ದು ತಾವೇ ನಕ್ಷತ್ರಗಳಾಗಿ ಹೋದರು.